## 2019 ಕ.ತೀ.ವ 1479

### ಸನ್ಮಾನ್ಯ ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ

### ಆಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು –ವಿರುದ್ಧ– ಕರ್ನಾಟಕ ರಾಜ್ಯ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಅರ್ಜಿದಾರ ಫರ್ಮ್ ಆಬ್ಜೆಕ್ಟ್ ಟೆಕ್ನಾಲಜೀಸ್ ಇದು, ರಾಜ್ಯ ಸರ್ಕಾರವು ನಿರ್ವಹಿಸುತ್ತಿರುವ ಚಿಕ್ಕಮಗಳೂರು ಜಿಲ್ಲೆಯ ವಿವಿಧ ಆರೋಗ್ಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಲು ಸಿಬ್ಬಂದಿಯನ್ನು ಒದಗಿಸುವುದಕ್ಕಾಗಿ ಹೊರಗುತ್ತಿಗೆ ಏಜೆನ್ಸಿಯಾಗಿ ಮೂರನೇ ಪ್ರತ್ಯರ್ಜಿದಾರರಾದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಚಿಕ್ಕಮಗಳೂರು ಇವರು ನೀಡಿದ ಕೆಲಸದ ಆದೇಶದ ಪ್ರಶ್ನಿತ ರದ್ದಿಯಾತಿಯನ್ನು ಪ್ರಶ್ನಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಕೆಲಸದ ಆದೇಶವನ್ನು ದಿನಾಂಕ: 01.04.2017ರಿಂದ ಪ್ರಾರಂಭವಾಗಿ ಒಂದು ವರ್ಷದ ಅವಧಿಗೆ ಅರ್ಜಿದಾರರ ಪರವಾಗಿ ಹೊರಡಿಸಲಾಗಿದ್ದು, ಅದು ದಿನಾಂಕ: 28.3.2017ರ ಅನುಬಂಧ–ಬಿ ಯಲ್ಲಿದೆ. ಅರ್ಜಿದಾರರು ಜಿಲ್ಲಾ ಮಟ್ಟದ ಡೇಟಾ ಎಂಟ್ರಿ ಆಪರೇಟರ್, ಚಾಲಕರು, ಲೆಕ್ಕಪತ್ರ ಸಹಾಯಕರು, ಎಲ್‌ಡಿಸಿ, ಇತ್ಯಾದಿಗಳಂಥ ವಿವಿಧ ಪ್ರವರ್ಗಗಳಲ್ಲಿ 56 ಸಿಬ್ಬಂದಿಗಳನ್ನು ಒದಗಿಸುವುದನ್ನು ನಿರೀಕ್ಷಿಸಲಾಗಿತ್ತು.

ಅರ್ಜಿದಾರರ ವಿರುದ್ಧ ಹೂಡಿರುವ ಕೆಲವು ದೂರುಗಳ ಆಧಾರದ ಮೇಲೆ, 2ನೇ ಪ್ರತ್ಯರ್ಜಿದಾರರಾದ ಜಿಲ್ಲಾ ಆರೋಗ್ಯಾಧಿಕಾರಿ, ಚಿಕ್ಕಮಗಳೂರು ಇವರು, ಈ ವಿಷಯದಲ್ಲಿ ಯಾವುದೇ ವಿಚಾರಣೆ ನಡೆಸದೇ, ದಿನಾಂಕ: 12.6.2017ರ ಅನುಬಂಧ–ಜೆ ಯಲ್ಲಿರುವ ಪ್ರಶ್ನಿತ ಆದೇಶದಲ್ಲಿ ಸದರಿ ಕಾರ್ಯಾದೇಶವನ್ನು

*ರಿಟ್ ಅರ್ಜಿ ಸಂಖ್ಯೆ: 28195/2017 (ಜಿಎಂ–ಟಿಇಎನ್), ದಿನಾಂಕ 9ನೇ ಆಗಸ್ಟ್, 2017.

ರದ್ದುಗೊಳಿಸಲು ಮುಂದಾಗಿರುತ್ತಾರೆ ಹಾಗೂ ದಿನಾಂಕ: 16.6.2017ರಂದು, ಸದರಿ ಪ್ರತ್ಯರ್ಜಿದಾರರು ಒಂದು ಹೊಸ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆಯನ್ನು ಹೊರಡಿಸಿ, ದಿನಾಂಕ: 13.7.2017ರಂದು ಮತ್ತೊಂದು ಏಜೆನ್ಸಿಯಾದ ಮೆ॥ ಜೆಮಿನಿ ಸೆಕ್ಯೂರಿಟಿ ಆ್ಯಂಡ್ ಅಲೈಡ್ ಸರ್ವೀಸಸ್, ದಾವಣಗೆರೆ ಇವರ ಪರವಾಗಿ ಹೊಸ ಕಾರ್ಯಾದೇಶವನ್ನು ನೀಡಿದ್ದು, ಅದನ್ನು ಪ್ರತ್ಯರ್ಜಿದಾರರು ಸಲ್ಲಿಸಿರುವ ಆಕ್ಷೇಪಣೆಗಳ ಹೇಳಿಕೆಯೊಂದಿಗೆ ದಾಖಲೆಯಲ್ಲಿ ಸೇರಿಸಲಾಗಿದೆ.

ಯಥಾರ್ಥವಾಗಿ, ಪ್ರತ್ಯರ್ಜಿದಾರ – ಪ್ರಾಧಿಕಾರವು, ಪ್ರಸ್ತುತ ರಿಟ್ ಅರ್ಜಿಯು ಇತ್ಯರ್ಥದಲ್ಲಿರುವುದರ ಅನುಸರಣೆಯನ್ನು ಸ್ವತಃ ಪ್ರಕಟಪಡಿಸಬೇಕಾಗಿತ್ತು ಮತ್ತು ಪ್ರಸ್ತುತ ರಿಟ್ ಅರ್ಜಿಯ ಇತ್ಯರ್ಥದ ಸಮಯದಲ್ಲಿ ಅಂತಹ ಹೊಸದಾದ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವುದಕ್ಕೆ ಈ ನ್ಯಾಯಾಲಯದ ನಿರ್ದಿಷ್ಟ ಅನುಮತಿಯನ್ನು ಪಡೆದುಕೊಳ್ಳಬೇಕಾಗಿತ್ತು. ಅದನ್ನು ಮಾಡುವ ಬದಲಾಗಿ, ಹೊಸ ಟೆಂಡರ್ ಪ್ರಕ್ರಿಯೆಯು ಪ್ರಶ್ನಿತವಾಗಿರುವುದರ ಹೊರತಾಗಿಯೂ, ಪ್ರತ್ಯರ್ಜಿದಾರ – ಪ್ರಾಧಿಕಾರವು ಅಂತಹ ಹೊಸ ಇ–ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವುದನ್ನು ಆಯ್ಕೆ ಮಾಡಿಕೊಂಡಿರುತ್ತದೆ ಮಾತ್ರವಲ್ಲದೆ ಈ ನ್ಯಾಯಾಲಯದ ನಿರ್ದಿಷ್ಟ ಅನುಮತಿಯನ್ನು ಪಡೆಯದೆಯೇ ಮೂರನೇ ಪಕ್ಷಕಾರರಾಗಿರುವ ಮೆ॥ ಜೆಮಿನಿ ಸೆಕ್ಯೂರಿಟಿ ಆ್ಯಂಡ್ ಅಲೈಡ್ ಸರ್ವೀಸಸ್, ದಾವಣಗೆರೆ ಇವರ ಪರವಾಗಿ ಅದನ್ನು ಅಂತಿಮಗೊಳಿಸಿರುವುದು, ಈ ನ್ಯಾಯಾಲಯವು ಬಲವಾಗಿ ಅಸಮ್ಮತಿ ತೋರಲು ಯೋಗ್ಯವಾದ ನಡತೆಯಾಗಿರುತ್ತದೆ. ನ್ಯಾಯಾಲಯದ ಕಾರ್ಯವಿಧಾನ ಇತ್ಯರ್ಥದಲ್ಲಿರುವುದೇ ಪ್ರತ್ಯರ್ಜಿದಾರರನ್ನು ರಕ್ಷಣೆಯಲ್ಲಿರುವುದಕ್ಕೆ ಮತ್ತು ಈ ನ್ಯಾಯಾಲಯದ ನಿರ್ದೇಶನಗಳನ್ನು ಕೋರಿ ನಿರ್ದಿಷ್ಟ ಅರ್ಜಿಯನ್ನು ಸಲ್ಲಿಸದೆಯೇ ವಸ್ತು ವಿಷಯದ ಯಥಾಸ್ಥಿತಿಯನ್ನು ಬದಲಾಯಿಸದಿರುವುದಕ್ಕೆ ಪರ್ಯಾಪ್ತವಾಗಿತ್ತು. ಅದನ್ನು ಮಾಡದೆ, ಪ್ರತ್ಯರ್ಜಿದಾರರು ತಮ್ಮ ಕಾನೂನುಬಾಹಿರ ಕೃತ್ಯಗಳ ಫಲಾನುಭವಿಯಾಗಿರುವ ಮೂರನೇ ಪಕ್ಷಕಾರರ ಗೈರುಹಾಜರಿ ಕುರಿತು ಮತ್ತು ಪ್ರಸ್ತುತ ಅರ್ಜಿದಾರರಿಗೆ ವಾಸ್ತವವಾಗಿ ಲಭ್ಯವಿಲ್ಲದಿರುವ ಪರ್ಯಾಯ ಪರಿಹಾರದ ವಾದದ ಬಗ್ಗೆ ದೂರುವಂತಿಲ್ಲ.

ಪ್ರತ್ಯರ್ಜಿದಾರರು ಸ್ವಾಭಾವಿಕ ನ್ಯಾಯದ ತತ್ವಗಳನ್ನು ಪಾಲಿಸುವುದಕ್ಕಿಂತ ಹೆಚ್ಚಾಗಿ ಅದನ್ನು ಉಲ್ಲಂಘಿಸಿದ್ದಾರೆ ಎಂಬುದನ್ನು ಗಮನಿಸಲಾಗಿದೆ. ಅರ್ಜಿದಾರರ ಮೇಲೆ ನೋಟೀಸನ್ನು ಜಾರಿಗೊಳಿಸಿ, ವಿವರಣೆಯನ್ನು ಪಡೆದ ಕಾರಣ ಮಾತ್ರದಿಂದ, ಅರ್ಜಿದಾರರ ಪರವಾಗಿ ಸದರಿ ಕರಾರನ್ನು ರದ್ದುಗೊಳಿಸುವುದಕ್ಕೆ ಪ್ರತ್ಯರ್ಜಿದಾರರನ್ನು ಪ್ರಾಯಶಃ ಹಕ್ಕುದಾರರನ್ನಾಗಿಸಬಹುದಾಗಿದ್ದ, ಅರ್ಜಿದಾರರ ವಿರುದ್ಧ ವಾಸ್ತವಾಂಶಗಳ ಸೂಕ್ತ ನಿರ್ಣಯಗಳಿಗೆ ಬರುವುದರೊಂದಿಗೆ, ಅರ್ಜಿದಾರರ ವಿರುದ್ಧದ ವಿಚಾರಣೆಯನ್ನು ಅದರ ತಾರ್ಕಿಕ ಅಂತ್ಯಕ್ಕೆ ತಂದು ಅದನ್ನು ತೀರ್ಮಾನಿಸಿದ ಹೊರತು, ಸದರಿ ಪಾಲನೆಯು ಪೂರ್ಣಗೊಂಡಿರುತ್ತದೆ ಎಂದು ಹೇಳಲಾಗುವುದಿಲ್ಲ.

ಈ ವಿಷಯದಲ್ಲಿ ಅಂತಹ ಯಾವುದೇ ವಿಚಾರಣೆ ನಡೆದಿರುವುದಿಲ್ಲ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಕ್ಷಮ ಪ್ರಾಧಿಕಾರಿಯು ಯಾವುದೇ ವಿಚಾರಣಾ ವರದಿಯನ್ನು ನೀಡಿರುವುದಿಲ್ಲ ಎಂದು ಒಪ್ಪಿಕೊಳ್ಳುವಲ್ಲಿ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ನ್ಯಾಯಸಮ್ಮತರಾಗಿ ನಡೆದುಕೊಂಡಿರುತ್ತಾರೆ.

ದಿನಾಂಕ: 12.06.2017ರ ಅನುಬಂಧ– ಜೆ ಇದರಲ್ಲಿರುವ ಅರ್ಜಿದಾರನ ಪರವಾಗಿ ಕರಾರನ್ನು ರದ್ದುಗೊಳಿಸಿ ಹೊರಡಿಸಿರುವ ಪ್ರಶ್ನಿತ ಆದೇಶ ಮತ್ತು ಹೊಸದಾದ ಇ–ಟೆಂಡರ್ ಪ್ರಕ್ರಿಯೆ ಮತ್ತು ಮೂರನೇ ಪಕ್ಷಕಾರರ ಪರವಾಗಿ ಕರಾರನ್ನು ನೀಡಿರುವುದು, ಕಾನೂನಿನಲ್ಲಿ ಸಮರ್ಥನೀಯವಾಗಿರುವುದಿಲ್ಲ ಮತ್ತು ಅದು ಈ ನ್ಯಾಯಾಲಯವು ರದ್ದುಪಡಿಸಿ ವಜಾಗೊಳಿಸಲು ಯೋಗ್ಯವಾದುದಾಗಿರುತ್ತದೆ ಎಂದು ಈ ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ.

ತದನುಸಾರವಾಗಿ, ಈ ಅರ್ಜಿಯು ಪುರಸ್ಕರಿಸಲು ಯೋಗ್ಯವಾಗಿದೆ. ಅರ್ಜಿದಾರರಿಗೆ 2ನೇ ಪ್ರತ್ಯರ್ಜಿದಾರರು ಸಂದಾಯ ಮಾಡಬೇಕಾದ 20,000/– ರೂಪಾಯಿಗಳ ವೆಚ್ಚ ಸಹಿತವಾಗಿ ಈ ಅರ್ಜಿಯನ್ನು ಪುರಸ್ಕರಿಸಲಾಗಿದೆ ಮತ್ತು ದಿನಾಂಕ: 12.06.2017ರ ಅನುಬಂಧ–ಜೆ ಯಲ್ಲಿರುವ ಪ್ರಶ್ನಿತ ಆದೇಶ ಹಾಗೂ ದಿನಾಂಕ: 16.06.2017ರ ಅನುಬಂಧ–ಕೆಯಲ್ಲಿರುವ ಹೊಸ ಇ–ಪ್ರೊಕ್ಯೂರ್‌ಮೆಂಟ್ ಅಧಿಸೂಚನೆ ಹಾಗೂ ದಿನಾಂಕ: 13.07.2017ರ ಅನುಬಂಧ–ಆರ್ 10 ರಲ್ಲಿರುವ ಮೂರನೇ ಪಕ್ಷಕಾರರ

**ಪರವಾಗಿ ಹೊರಡಿಸಲಾಗಿರುವ ಕಾರ್ಯಾದೇಶ ಇವುಗಳು ವಜಾಗೊಳಿಸಲು ಯೋಗ್ಯವಾಗಿದ್ದು, ತದನುಸಾರವಾಗಿ ವಜಾಗೊಳಿಸಲಾಗಿರುತ್ತದೆ. ದಿನಾಂಕ: 28.03.2017ರ ಅನುಬಂಧ–ಬಿ ಯಲ್ಲಿನ ಕಾರ್ಯಾದೇಶದ ಪರಿಭಾಷೆಯಲ್ಲಿನ ಸಿಬ್ಬಂದಿಯನ್ನು ಒದಗಿಸಲು ಅರ್ಜಿದಾರರಿಗೆ ಅವಕಾಶ ನೀಡತಕ್ಕದ್ದು ಮತ್ತು ಈ ಕಾರ್ಯಾದೇಶದ ಅನುಷ್ಠಾನಕ್ಕಾಗಿ ಪ್ರತ್ಯರ್ಜಿದಾರರು ಕೂಡಲೇ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ದಿನಾಂಕ: 01.04.2017ರಿಂದ ಒಂದು ವರ್ಷದ ಕರಾರಿನ ಅವಧಿಯಲ್ಲಿನ ತಮ್ಮ ಕರಾರು ಸಂಬಂಧಿ ಬಾಧ್ಯತೆಗಳನ್ನು ನಿರ್ವಹಿಸುವುದು.**

ಅರ್ಜಿದಾರರ ಪರ: ಶ್ರೀ ಮನ್‌ಮೋಹನ್ ಪಿ.ಎನ್. ನ್ಯಾಯವಾದಿಗಳು.
ಪ್ರತ್ಯರ್ಜಿದಾರರ ಪರ: ಶ್ರೀಮತಿ ಪ್ರತಿಮಾ ಹೊನ್ನಾಪುರ, ಹೆಚ್ಚುವರಿ ಸರ್ಕಾರಿ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ:**

1. ಅರ್ಜಿದಾರ ಫರ್ಮ್ ಆಬ್ಜೆಕ್ಟ್ ಟೆಕ್ನಾಲಜೀಸ್ ಇದು, ರಾಜ್ಯ ಸರ್ಕಾರವು ನಿರ್ವಹಿಸುತ್ತಿರುವ ಚಿಕ್ಕಮಗಳೂರು ಜಿಲ್ಲೆಯ ವಿವಿಧ ಆರೋಗ್ಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಲು ಸಿಬ್ಬಂದಿಯನ್ನು ಒದಗಿಸುವುದಕ್ಕಾಗಿ ಹೊರಗುತ್ತಿಗೆ ಏಜೆನ್ಸಿಯಾಗಿ ಮೂರನೇ ಪ್ರತ್ಯರ್ಜಿದಾರರಾದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಚಿಕ್ಕಮಗಳೂರು ಇವರು ನೀಡಿದ ಕೆಲಸದ ಆದೇಶದ ಪ್ರಶ್ನಿತ ರದ್ದಿಯಾತಿಯನ್ನು ಪ್ರಶ್ನಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಕೆಲಸದ ಆದೇಶವನ್ನು ದಿನಾಂಕ: 01.04.2017ರಿಂದ ಪ್ರಾರಂಭವಾಗಿ ಒಂದು ವರ್ಷದ ಅವಧಿಗೆ ಅರ್ಜಿದಾರರ ಪರವಾಗಿ ಹೊರಡಿಸಲಾಗಿದ್ದು, ಅದು ದಿನಾಂಕ: 28.3.2017ರ ಅನುಬಂಧ–ಬಿ ಯಲ್ಲಿದೆ. ಅರ್ಜಿದಾರರು ಜಿಲ್ಲಾ ಮಟ್ಟದ ಡೇಟಾ ಎಂಟ್ರಿ ಆಪರೇಟರ್, ಚಾಲಕರು, ಲೆಕ್ಕಪತ್ರ ಸಹಾಯಕರು, ಎಲ್‌ಡಿಸಿ, ಇತ್ಯಾದಿಗಳಂಥ ವಿವಿಧ ಪ್ರವರ್ಗಗಳಲ್ಲಿ 56 ಸಿಬ್ಬಂದಿಗಳನ್ನು ಒದಗಿಸುವುದನ್ನು ನಿರೀಕ್ಷಿಸಲಾಗಿತ್ತು.

2. ಅರ್ಜಿದಾರರ ವಿರುದ್ಧ ಹೂಡಿರುವ ಕೆಲವು ದೂರುಗಳ ಆಧಾರದ ಮೇಲೆ, 2ನೇ ಪ್ರತ್ಯರ್ಜಿದಾರರಾದ ಜಿಲ್ಲಾ ಆರೋಗ್ಯಾಧಿಕಾರಿ, ಚಿಕ್ಕಮಗಳೂರು ಇವರು, ಈ ವಿಷಯದಲ್ಲಿ ಯಾವುದೇ ವಿಚಾರಣೆ ನಡೆಸದೇ, ದಿನಾಂಕ: 12.6.2017ರ ಅನುಬಂಧ-ಜೆ ಯಲ್ಲಿರುವ ಪ್ರಶ್ನಿತ ಆದೇಶದಲ್ಲಿ ಸದರಿ ಕಾರ್ಯಾದೇಶವನ್ನು ರದ್ದುಗೊಳಿಸಲು ಮುಂದಾಗಿರುತ್ತಾರೆ ಹಾಗೂ ದಿನಾಂಕ: 16.6.2017ರಂದು, ಸದರಿ ಪ್ರತ್ಯರ್ಜಿದಾರರು ಒಂದು ಹೊಸ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆಯನ್ನು ಹೊರಡಿಸಿ, ದಿನಾಂಕ: 13.7.2017ರಂದು ಮತ್ತೊಂದು ಏಜೆನ್ಸಿಯಾದ ಮೆ॥ ಜೆಮಿನಿ ಸೆಕ್ಯೂರಿಟಿ ಆ್ಯಂಡ್ ಅಲೈಡ್ ಸರ್ವೀಸಸ್, ದಾವಣಗೆರೆ ಇವರ ಪರವಾಗಿ ಹೊಸ ಕಾರ್ಯಾದೇಶವನ್ನು ನೀಡಿದ್ದು, ಅದನ್ನು ಪ್ರತ್ಯರ್ಜಿದಾರರು ಸಲ್ಲಿಸಿರುವ ಆಕ್ಷೇಪಣೆಗಳ ಹೇಳಿಕೆಯೊಂದಿಗೆ ದಾಖಲೆಯಲ್ಲಿ ಸೇರಿಸಲಾಗಿದೆ.

3. ಅರ್ಜಿದಾರ ಕಂಪೆನಿಯು, ಪ್ರಸ್ತುತ ರಿಟ್ ಅರ್ಜಿಯನ್ನು ದಿನಾಂಕ: 12.6.2017ರ ಸದರಿ ರದ್ದಿಯಾತಿ ಆದೇಶವನ್ನು ಪ್ರಶ್ನಿಸಿ ದಿನಾಂಕ: 27.6.2017ರಂದು ಈ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತದೆ; ಆದರೆ, ಅರ್ಜಿದಾರರ ಪರವಾಗಿ ಯಾವುದೇ ಮಧ್ಯಂತರ ಆದೇಶದ ಮಂಜೂರಾತಿ ಆಗಿರಲಿಲ್ಲವಾಗಿ, 2ನೇ ಪ್ರತ್ಯರ್ಜಿದಾರರು ಹೊಸ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲು ಮುಂದಾಗಿದ್ದು, ಸದರಿ ಮೂರನೇ ಪಕ್ಷಕಾರರಾಗಿರುವ ಮೆ॥ ಜೆಮಿನಿ ಸೆಕ್ಯೂರಿಟಿ ಆ್ಯಂಡ್ ಅಲೈಡ್ ಸರ್ವೀಸಸ್, ದಾವಣಗೆರೆ ಇವರ ಪರವಾಗಿ ಈ ಹಿಂದೆ ಹೇಳಿರುವ ಕಾರ್ಯಾದೇಶವನ್ನು ಹೊರಡಿಸಿರುತ್ತಾರೆ.

4. ಅರ್ಜಿದಾರರ ವಿರುದ್ಧ ಸುಳ್ಳು ದೂರುಗಳನ್ನು ನೀಡಿರುವುದಷ್ಟೇ ಅಲ್ಲದೇ, ಕಳೆದ ಅವಧಿಯ ದೂರಿನ ಸಮರ್ಥನೆಗಳನ್ನು ಅವಲಂಬಿಸಿ ದಿನಾಂಕ: 01.04.2017ರಂದೇ ಕಾರ್ಯಾದೇಶದ ಪ್ರಾರಂಭದ ಹಂತದಲ್ಲಿ ಅರ್ಜಿದಾರರ ಪರವಾಗಿ ನೀಡಿದ ಕಾರ್ಯಾದೇಶವನ್ನು ರದ್ದುಗೊಳಿಸುವುದಕ್ಕೆ ಸದರಿ ಪ್ರತ್ಯರ್ಜಿದಾರರು ಅವುಗಳನ್ನೇ ಅವಲಂಬಿಸಿದ್ದು, ಆ ಅವಧಿಯಲ್ಲಿ ಅರ್ಜಿದಾರರು ಸದರಿ ಇಲಾಖೆಯಿಂದ ಅಂತಹುದೇ ಕಾರ್ಯಾದೇಶವನ್ನು ನಿರ್ವಹಿಸುತ್ತಿದ್ದರು ಹಾಗೂ ಪ್ರತ್ಯರ್ಜಿದಾರರಾದ ಜಿಲ್ಲಾ

ಆರೋಗ್ಯಾಧಿಕಾರಿಗಳು ಅರ್ಜಿದಾರರ ವಿರುದ್ಧ ಯಾವುದೇ ವಿಚಾರಣೆಯನ್ನು ನಡೆಸದೇ ಮತ್ತು ಅರ್ಜಿದಾರರು ನೀಡಿದ ಅಂತಹ ದೂರುಗಳ ಬಗ್ಗೆ ಪಾಟೀ ಸವಾಲು ಮಾಡುವ ಯಾವುದೇ ಅವಕಾಶವನ್ನು ಆತನಿಗೆ ನೀಡದೇ ಕಾರ್ಯಾದೇಶವನ್ನು ರದ್ದುಗೊಳಿಸಿರುತ್ತಾರೆ ಎಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ನ್ಯಾಯಾಲಯದ ಮುಂದೆ ವಾದಿಸಿರುತ್ತಾರೆ.

5. ಇನ್ನೊಂದೆಡೆ, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಾದ ಶ್ರೀಮತಿ ಪ್ರತಿಮಾ ಹೊನ್ನಾಪುರ ಅವರು, ಹಿಂದಿನ ವರ್ಷದಲ್ಲಿ ಅರ್ಜಿದಾರ ಕಂಪೆನಿಯು ನಿಯೋಜಿಸಿಕೊಂಡಿರುವ ಸಿಬ್ಬಂದಿಗಳಿಗೆ ಪೂರ್ಣ ವೇತನವನ್ನು ಸಂದಾಯ ಮಾಡದಿರುವ ಬಗ್ಗೆ ಅರ್ಜಿದಾರರ ವಿರುದ್ಧ ಗಂಭೀರ ದೂರುಗಳಿದ್ದು, ಟೆಂಡರ್ ಷರತ್ತು ಸಂಖ್ಯೆ: 18 ಇದು ಅರ್ಜಿದಾರರ ಅಥವಾ ಅವರಂತಹ ಸೇವೆ ಒದಗಿಸುವವರ ವಿರುದ್ಧ ದೂರುಗಳಿದ್ದರೆ, ವಿವಾದಿತ ಕರಾರನ್ನು ಯಾವುದೇ ಕಾರಣಗಳನ್ನು ನೀಡದೇ ರದ್ದುಗೊಳಿಸಬಹುದಾಗಿದೆ ಎಂದು ನಿರ್ದಿಷ್ಟವಾಗಿ ವಿಧಿಸಿರುತ್ತದೆ ಎಂದು ನ್ಯಾಯಾಲಯದ ಮುಂದೆ ವಾದಿಸಿರುತ್ತಾರೆ. ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಅವಲಂಬಿಸಿರುವ ಒಪ್ಪಂದದ ಅನುಬಂಧ – ಸಿ ಇದರ ಖಂಡ 18ನ್ನು ಈ ಕೆಳಗೆ ಪುನರುಚ್ಚರಿಸಲಾಗಿದೆ:

> *"**18.** ಹೊರಗುತ್ತಿಗೆ ಏಜೆನ್ಸಿಯು ಸೇವೆಯು ತೃಪ್ತಿಕರವಾಗಿಲ್ಲದಿದ್ದರೆ ಅಥವಾ ವೈದ್ಯಾಧಿಕಾರಿಗಳಿಂದ ದೂರನ್ನು ಸ್ವೀಕರಿಸಿದ ಸಂದರ್ಭದಲ್ಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಚಿಕ್ಕಮಗಳೂರು ಅವರು ಯಾವುದೇ ಕಾರಣವನ್ನು ನೀಡದೆಯೇ ನಿಮ್ಮ ಸೇವೆಯುನ್ನು ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ".*

ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಮುಂದುವರೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ 16ನೇ

ಪ್ರಕರಣದ ಕಡೆಗೆ ನ್ಯಾಯಾಲಯದ ಗಮನವನ್ನು ಸೆಳೆದು, 13ನೇ ಪ್ರಕರಣದಡಿಯಲ್ಲಿ ಸರ್ಕಾರವನ್ನು ಹೊರತುಪಡಿಸಿ ಟೆಂಡರ್ ಸ್ವೀಕೃತಿ ಪ್ರಾಧಿಕಾರವು ಹೊರಡಿಸಿದ ಆದೇಶದಿಂದ ಬಾಧಿತರಾಗುವ ಯಾರೆ ಟೆಂಡರ್‌ದಾರನು ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನಿಗದಿತ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದಾಗಿದೆ ಎಂದು ನಿವೇದಿಸಿಕೊಂಡಿರುತ್ತಾರೆ. ಆದ್ದರಿಂದ, ಅವರು ಮೂರನೇ ಪಕ್ಷಕಾರರಾಗಿರುವ ಮೆ॥ ಜೆಮಿನಿ ಸೆಕ್ಯೂರಿಟಿ ಆ್ಯಂಡ್ ಅಲೈಡ್ ಸರ್ವೀಸಸ್, ದಾವಣಗೆರೆ ಇವರ ಪರವಾಗಿ ನೀಡಿರುವ ಕಾರ್ಯಾದೇಶದ ವಿರುದ್ಧ, ಅರ್ಜಿದಾರರು ಸದರಿ ಅಧಿನಿಯಮದ 16ನೇ ಪ್ರಕರಣದ ಅಡಿಯಲ್ಲಿ ಅಪೀಲನ್ನು ಹೂಡುವ ಮೂಲಕ ಪರಿಹಾರ ಹೊಂದಬಹುದಾಗಿದೆ ಎಂದು ವಾದಿಸಿದ್ದಾರೆ. ಸದರಿ ಮೂರನೇ ಪಕ್ಷಕಾರರನ್ನು ಪ್ರಸ್ತುತ ಪ್ರಕರಣದಲ್ಲಿ ಪಕ್ಷಕಾರ ಪ್ರತ್ಯರ್ಜಿದಾರರಾಗಿ ಸೇರಿಸಿಕೊಂಡಿರುವುದಿಲ್ಲ ಮತ್ತು ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಈ ನ್ಯಾಯಾಲಯದ ಮುಂದೆ ಈಗ ಇರುವಂಥ ಕರಾರಿನ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದರಲ್ಲಿ ನ್ಯಾಯಾಲಯವು ನಿಧಾನಗತಿಯಲ್ಲಿರುತ್ತದೆ ಎಂದೂ ಸಹ ಅವರು ನಿವೇದಿಸಿಕೊಂಡಿರುತ್ತಾರೆ.

6. ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ ನಂತರ ಹಾಗೂ ದಾಖಲೆಯಲ್ಲಿರುವ ಸಾಕ್ಷ್ಯಗಳನ್ನು ಪರಿಶೀಲಿಸಿದ ನಂತರ, ಅರ್ಜಿದಾರರ ವಿರುದ್ಧ ಸಲ್ಲಿಸಿರುವ ದೂರುಗಳನ್ನು ಪ್ರತ್ಯರ್ಜಿದಾರ ಜಿಲ್ಲಾ ಆರೋಗ್ಯಾಧಿಕಾರಿಗಳು ಅವುಗಳಲ್ಲಿ ಹೆಚ್ಚಿನವು ದಿನಾಂಕ: 01.04.2017ರಿಂದ ಆಕ್ಷೇಪಣೆಯಲ್ಲಿರುವ ಪ್ರಸ್ತುತ ಕಾಮಗಾರಿಯ ಆರಂಭಕ್ಕೆ ಪೂರ್ವದ ಅವಧಿಗೆ ಸಂಬಂಧಿಸಿದವುಗಳಾಗಿದ್ದರಿಂದ ಅವುಗಳನ್ನು ಅವಲಂಬಿಸಿರುವುದರಲ್ಲಿ ಸಮರ್ಥನೀಯತೆ ಇರಲಿಲ್ಲವೆಂದು ನ್ಯಾಯಾಲಯಕ್ಕೆ ಮನವರಿಕೆಯಾಗಿದೆ. ಈ ವಿಷಯ ಕುರಿತು ವಿಚಾರಣೆ ನಡೆಸದೆ ದೂರಿನಲ್ಲಿರುವ ಸಮರ್ಥನೆಗಳ ಸತ್ಯಾಸತ್ಯತೆಯನ್ನು ಪ್ರತ್ಯರ್ಜಿದಾರ ಪ್ರಾಧಿಕಾರಿಯು ಸ್ವತಃ ಪರೀಕ್ಷಿಸಿ ಪ್ರಮಾಣಿಸಲು ಸಾಧ್ಯವಾಗುವಂತೆ ದೂರುದಾರರನ್ನು ಪಾಟೀ ಸವಾಲಿಗೆ ಒಳಪಡಿಸುವ ಸೂಕ್ತ ಹಾಗೂ ಯುಕ್ತವಾದ ಅವಕಾಶವನ್ನು ಅರ್ಜಿದಾರನಿಗೆ ನೀಡಿದ ನಂತರ

ಆತನ ನಡತೆಯ ದುರ್ವರ್ತನೆ ಬಗೆಗಿನ ಸಂಗತಿ ಕುರಿತ ನಿರ್ಣಯಗಳಿಗೆ ಬರಲು ಸದರಿ ಪ್ರತ್ಯರ್ಜಿದಾರರು ಅಂತಹ ದೂರುಗಳನ್ನು ಅವಲಂಬಿಸಬಾರದಿತ್ತು.

7. ಹಿಂದಿನ ಅವಧಿಯಲ್ಲಿನ ದೂರುಗಳಿಗೆ ಇದ್ದ ಸುಸಂಬದ್ಧತೆ ಹಾಗೂ ಪರಿಣಾಮಗಳು ಅತ್ಯಲ್ಪವಾಗಿದ್ದವು. ಅನುಬಂಧ –ಬಿ ಯಲ್ಲಿರುವಂತೆ ದಿನಾಂಕ: 28.3.2017ರಂದು ಅರ್ಜಿದಾರರ ಪರವಾಗಿ ಪ್ರತ್ಯರ್ಜಿದಾರರು ಕಾರ್ಯಾದೇಶವನ್ನು ಹೊರಡಿಸಿದಾಗ, ಅಂತಹ ಹಿಂದಿನ ನಡತೆಯು ಯಾವುದೇ ಸುಸಂಬದ್ಧತೆ ಹೊಂದಿದ್ದರೆ, ಅರ್ಜಿದಾರರ ಪರವಾಗಿ ಕಾರ್ಯಾದೇಶವನ್ನು ಹೊರಡಿಸದೇ ಇರುವುದರಿಂದ ಸದರಿ ಪ್ರತ್ಯರ್ಜಿದಾರರನ್ನು ಯಾವುದೂ ತಡೆಗಟ್ಟುತ್ತಿರಲೇ ಇಲ್ಲ. ಒಮ್ಮೆ ಹೊಸ ಕಾರ್ಯಾದೇಶವನ್ನು ಹೊರಡಿಸಿದ್ದರೆ ಎರಡು ಪಕ್ಷಕಾರರ ನಡುವೆ ಸಿಂಧುವಾದ ಹಾಗೂ ಹೊಸದಾದ ಕರಾರು ಅಸ್ತಿತ್ವಕ್ಕೆ ಬಂದಿದ್ದು, ಅದರಲ್ಲಿನ ಒಬ್ಬ ಪಕ್ಷಕಾರರು, ಅದು ಸರ್ಕಾರಿ ಇಲಾಖೆ ಅಥವಾ ಸಾರ್ವಜನಿಕ ಪ್ರಾಧಿಕಾರವೇ ಆಗಿದ್ದರೂ ಸಹ, ಕಾನೂನಿಗೆ ಅನುಸಾರವಾಗಿದ್ದ ಹೊರತು, ಆ ಕರಾರಿನ ಬಾಧ್ಯತೆಯಿಂದ ಏಕಪಕ್ಷೀಯವಾಗಿ ಹಿಂದೆ ಸರಿಯಲಾಗದು. ಇನ್ನೊಂದೆಡೆ, ಸಾರ್ವಜನಿಕ ಪ್ರಾಧಿಕಾರ ಅಥವಾ ಸರ್ಕಾರಿ ಇಲಾಖೆಯು ಮೊದಲನೆಯದಾಗಿ ನ್ಯಾಯೋಚಿತವಾಗಿ, ಪಾರದರ್ಶಕತೆಯಿಂದ ಹಾಗೂ ಸ್ವಾಭಾವಿಕ ನ್ಯಾಯದ ತತ್ವಗಳನ್ನು ಪಾಲಿಸುವುದರೊಂದಿಗೆ ಕಾನೂನಿಗೆ ಅನುಸಾರವಾಗಿ ಕಾರ್ಯ ನಿರ್ವಹಿಸುವುದನ್ನು ಹೆಚ್ಚಾಗಿ ನಿರೀಕ್ಷಿಸಲಾಗುತ್ತದೆ.

8. ಪ್ರತ್ಯರ್ಜಿದಾರ – ಸರ್ಕಾರಿ ಇಲಾಖೆಯು ಯಾವುದೇ ಕಾರಣವನ್ನು ನೀಡದೆಯೇ ಕರಾರನ್ನು ರದ್ದುಗೊಳಿಸಬಹುದಾಗಿದೆ ಎಂದು ಹೇಳುವಾಗ, ಮೇಲೆ ಒಪ್ಪಂದದಲ್ಲಿ ಉದ್ಧರಿಸಿರುವ ಖಂಡ–18ರಂತಹ ಖಂಡವು ಅದರಿಂದಾಗಿಯೇ ಕಾನೂನುಬಾಹಿರ ಹಾಗೂ ಅಸಮರ್ಥನೀಯವಾಗಿರುತ್ತದೆ. ಸಾರ್ವಜನಿಕ ಪ್ರಾಧಿಕಾರವು ನಿರಂಕುಶವಾಗಿ ಕಾರ್ಯನಿರ್ವಹಿಸಲಾಗುವುದಿಲ್ಲ ಮತ್ತು ಮೇಲೆ ಉದ್ಧರಿಸಿರುವ ಪ್ರಸ್ತುತ ಮೊಕದ್ದಮೆಯಲ್ಲಿನ ಖಂಡ–18ರಂತಹ ಖಂಡದಲ್ಲಿ ಮಾಡಲಾಗಿರುವಂತೆ ಅಷ್ಟು ನಿರಂಕುಶವಾಗಿ ಕಾರ್ಯನಿರ್ವಹಿಸುವುದಕ್ಕೆ ಈ ರೀತಿಯ ಅಧಿಕಾರಗಳಿಂದ

ಸ್ವತಃ ನಿಹಿತವಾಗಲಾಗುವುದಿಲ್ಲ. ಪಾರದರ್ಶಕತೆ ಹಾಗೂ ಉತ್ತರದಾಯಿತ್ವಗಳ ಪ್ರಸ್ತುತ ಯುಗದಲ್ಲಿ ಸದರಿ ಖಂಡವು, ನ್ಯಾಯಾಲಯದ ಆತ್ಮಸಾಕ್ಷಿಗೆ ಧಕ್ಕೆ ತರುತ್ತದೆ. ಆದ್ದರಿಂದ, ಇದು ನಿರರ್ಥಕಗೊಳ್ಳಲು ಯೋಗ್ಯವಾದುದಾಗಿದೆ. ತದನುಸಾರವಾಗಿ, ಅದನ್ನು ನಿರರ್ಥಕಗೊಳಿಸಲಾಗಿರುತ್ತದೆ.

9. ಅರ್ಜಿದಾರರು, ಸದರಿ ಮೂರನೇ ಪಕ್ಷಕಾರರಾಗಿರುವ ಮೆ॥ ಜೆಮಿನಿ ಸೆಕ್ಯೂರಿಟಿ ಆ್ಯಂಡ್ ಅಲೈಡ್ ಸರ್ವೀಸಸ್, ದಾವಣಗೆರೆ ಇವರನ್ನು ಪ್ರಸ್ತುತ ಮೊಕದ್ದಮೆಯಲ್ಲಿ ಪಕ್ಷಕಾರ–ಪ್ರತ್ಯರ್ಜಿದಾರರಾಗಿ ಸೇರಿಸಬೇಕಾಗಿತ್ತು ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ 16ನೇ ಪ್ರಕರಣದ ಅಡಿಯಲ್ಲಿ ಅಪೀಲು ಸಲ್ಲಿಸುವ ಮೂಲಕ ಪರಿಹಾರವನ್ನು ಲಭ್ಯಗೊಳಿಸಬೇಕಾಗಿತ್ತು ಎಂಬ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರ ವಾದಾಂಶಕ್ಕೆ ಬರುವುದಾದರೆ, ಸರ್ಕಾರಿ ವಕೀಲರು ಎತ್ತಿರುವ ಈ ಎರಡೂ ವಾದಾಂಶಗಳನ್ನೂ ಸಹ ಪ್ರಸ್ತುತ ಮೊಕದ್ದಮೆಯಲ್ಲಿ ತಪ್ಪಾಗಿ ಗ್ರಹಿಸಲಾಗಿರುತ್ತದೆ.

10. ಮೊದಲನೆಯದಾಗಿ, ಸರ್ಕಾರಿ ಏಜೆನ್ಸಿಯು ಕೈಗೊಂಡಿರುವ ಟೆಂಡರ್ ಪ್ರಕ್ರಿಯೆಯಲ್ಲಿ ಕಾರ್ಯಾದೇಶವನ್ನು ನೀಡಿ ನಿರ್ಣಯ ತೆಗೆದುಕೊಂಡ ಸಮಯದಲ್ಲಿ ಸದರಿ ಅಪೀಲು ಪರಿಹಾರವನ್ನು ನೀಡಿರುವುದರಿಂದ 16ನೇ ಪ್ರಕರಣವು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲ. ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿರುವುದರ ಹೊರತಾಗಿಯೂ, ಅರ್ಜಿದಾರರ ಪರವಾಗಿ ಯಾವುದೇ ಮಧ್ಯಂತರ ಆದೇಶವನ್ನು ಹೊರಡಿಸಿದೆ ಇದ್ದದ್ದರಿಂದ, ಪ್ರಸ್ತುತ ಮೊಕದ್ದಮೆಯ ತರುವಾಯದ ಹಂತದಲ್ಲಿ ಪ್ರತ್ಯರ್ಜಿದಾರರು–ಪ್ರಾಧಿಕಾರಗಳು ಕೈಗೊಂಡಿದ್ದ ಸದರಿ ಟೆಂಡರ್ ಪ್ರಕ್ರಿಯೆಗೆ ಪ್ರಸ್ತುತ ಅರ್ಜಿದಾರರು ಪಕ್ಷಕಾರರಾಗಿರಲಿಲ್ಲ.

11. ಯಥಾರ್ಥವಾಗಿ, ಪ್ರತ್ಯರ್ಜಿದಾರ – ಪ್ರಾಧಿಕಾರವು, ಪ್ರಸ್ತುತ ರಿಟ್ ಅರ್ಜಿಯು ಇತ್ಯರ್ಥದಲ್ಲಿರುವುದರ ಅನುಸರಣೆಯನ್ನು ಸ್ವತಃ ಪ್ರಕಟಪಡಿಸಬೇಕಾಗಿತ್ತು ಮತ್ತು ಪ್ರಸ್ತುತ ರಿಟ್ ಅರ್ಜಿಯ ಇತ್ಯರ್ಥದ ಸಮಯದಲ್ಲಿ ಅಂತಹ ಹೊಸದಾದ ಟೆಂಡರ್

ಪ್ರಕ್ರಿಯೆಯನ್ನು ಕೈಗೊಳ್ಳುವುದಕ್ಕೆ ಈ ನ್ಯಾಯಾಲಯದ ನಿರ್ದಿಷ್ಟ ಅನುಮತಿಯನ್ನು ಪಡೆದುಕೊಳ್ಳಬೇಕಾಗಿತ್ತು. ಅದನ್ನು ಮಾಡುವ ಬದಲಾಗಿ, ಹೊಸ ಟೆಂಡರ್ ಪ್ರಕ್ರಿಯೆಯು ಪ್ರಶ್ನಿತವಾಗಿರುವುದರ ಹೊರತಾಗಿಯೂ, ಪ್ರತ್ಯರ್ಜಿದಾರ – ಪ್ರಾಧಿಕಾರವು ಅಂತಹ ಹೊಸ ಇ–ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವುದನ್ನು ಆಯ್ಕೆ ಮಾಡಿಕೊಂಡಿರುತ್ತದೆ ಮಾತ್ರವಲ್ಲದೆ ಈ ನ್ಯಾಯಾಲಯದ ನಿರ್ದಿಷ್ಟ ಅನುಮತಿಯನ್ನು ಪಡೆಯದೆಯೇ ಮೂರನೇ ಪಕ್ಷಕಾರರಾಗಿರುವ ಮೆ।। ಜೆಮಿನಿ ಸೆಕ್ಯೂರಿಟಿ ಆ್ಯಂಡ್ ಅಲೈಡ್ ಸರ್ವೀಸಸ್, ದಾವಣಗೆರೆ ಇವರ ಪರವಾಗಿ ಅದನ್ನು ಅಂತಿಮಗೊಳಿಸಿರುವುದು, ಈ ನ್ಯಾಯಾಲಯವು ಬಲವಾಗಿ ಅಸಮ್ಮತಿ ತೋರಲು ಯೋಗ್ಯವಾದ ನಡತೆಯಾಗಿರುತ್ತದೆ. ನ್ಯಾಯಾಲಯದ ಕಾರ್ಯವಿಧಾನ ಇತ್ಯರ್ಥದಲ್ಲಿರುವುದೇ ಪ್ರತ್ಯರ್ಜಿದಾರರನ್ನು ರಕ್ಷಣೆಯಲ್ಲಿರುವುದಕ್ಕೆ ಮತ್ತು ಈ ನ್ಯಾಯಾಲಯದ ನಿರ್ದೇಶನಗಳನ್ನು ಕೋರಿ ನಿರ್ದಿಷ್ಟ ಅರ್ಜಿಯನ್ನು ಸಲ್ಲಿಸದೆಯೇ ವಸ್ತು ವಿಷಯದ ಯಥಾಸ್ಥಿತಿಯನ್ನು ಬದಲಾಯಿಸದಿರುವುದಕ್ಕೆ ಪರ್ಯಾಪ್ತವಾಗಿತ್ತು. ಅದನ್ನು ಮಾಡದೆ, ಪ್ರತ್ಯರ್ಜಿದಾರರು ತಮ್ಮ ಕಾನೂನುಬಾಹಿರ ಕೃತ್ಯಗಳ ಫಲಾನುಭವಿಯಾಗಿರುವ ಮೂರನೇ ಪಕ್ಷಕಾರರ ಗೈರುಹಾಜರಿ ಕುರಿತು ಮತ್ತು ಪ್ರಸ್ತುತ ಅರ್ಜಿದಾರರಿಗೆ ವಾಸ್ತವವಾಗಿ ಲಭ್ಯವಿಲ್ಲದಿರುವ ಪರ್ಯಾಯ ಪರಿಹಾರದ ವಾದದ ಬಗ್ಗೆ ದೂರುವಂತಿಲ್ಲ.

12. ಪ್ರತ್ಯರ್ಜಿದಾರರು ಸ್ವಾಭಾವಿಕ ನ್ಯಾಯದ ತತ್ವಗಳನ್ನು ಪಾಲಿಸುವುದಕ್ಕಿಂತ ಹೆಚ್ಚಾಗಿ ಅದನ್ನು ಉಲ್ಲಂಘಿಸಿದ್ದಾರೆ ಎಂಬುದನ್ನು ಗಮನಿಸಲಾಗಿದೆ. ಅರ್ಜಿದಾರರ ಮೇಲೆ ನೋಟೀಸನ್ನು ಜಾರಿಗೊಳಿಸಿ, ವಿವರಣೆಯನ್ನು ಪಡೆದ ಕಾರಣ ಮಾತ್ರದಿಂದ, ಅರ್ಜಿದಾರರ ಪರವಾಗಿ ಸದರಿ ಕರಾರನ್ನು ರದ್ದುಗೊಳಿಸುವುದಕ್ಕೆ ಪ್ರತ್ಯರ್ಜಿದಾರರನ್ನು ಪ್ರಾಯಶಃ ಹಕ್ಕುದಾರರನ್ನಾಗಿಸಬಹುದಾಗಿದ್ದ, ಅರ್ಜಿದಾರರ ವಿರುದ್ಧ ವಾಸ್ತವಾಂಶಗಳ ಸೂಕ್ತ ನಿರ್ಣಯಗಳಿಗೆ ಬರುವುದರೊಂದಿಗೆ, ಅರ್ಜಿದಾರರ ವಿರುದ್ಧದ ವಿಚಾರಣೆಯನ್ನು ಅದರ ತಾರ್ಕಿಕ ಅಂತ್ಯಕ್ಕೆ ತಂದು ಅದನ್ನು ತೀರ್ಮಾನಿಸಿದ ಹೊರತು, ಸದರಿ ಪಾಲನೆಯು ಪೂರ್ಣಗೊಂಡಿರುತ್ತದೆ ಎಂದು ಹೇಳಲಾಗುವುದಿಲ್ಲ.

13. ಈ ವಿಷಯದಲ್ಲಿ ಅಂತಹ ಯಾವುದೇ ವಿಚಾರಣೆ ನಡೆದಿರುವುದಿಲ್ಲ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಕ್ಷಮ ಪ್ರಾಧಿಕಾರಿಯು ಯಾವುದೇ ವಿಚಾರಣಾ ವರದಿಯನ್ನು ನೀಡಿರುವುದಿಲ್ಲ ಎಂದು ಒಪ್ಪಿಕೊಳ್ಳುವಲ್ಲಿ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ನ್ಯಾಯಸಮ್ಮತರಾಗಿ ನಡೆದುಕೊಂಡಿರುತ್ತಾರೆ.

14. ಇಂಥ ಕರಾರು ಸಂಬಂಧಿ ವಿಷಯಗಳಲ್ಲಿ, ಯಾವಾಗಲೂ ನಿರ್ದಿಷ್ಟ ವಾಸ್ತವ ಸಂಗತಿಗಳ ಕೆಲವು ಪ್ರಶ್ನೆಗಳು ಅಡಕವಾಗಿರುವ ಕಾರಣದಿಂದ ಇಂಥ ವಿಷಯುಗಳಲ್ಲಿ ಈ ನ್ಯಾಯಾಲಯುವು ಹಸ್ತಕ್ಷೇಪ ಮಾಡುವುದನ್ನು ಇಷ್ಟಪಡುವುದಿಲ್ಲವೆಂಬುದು ವಾಸ್ತವ ಸಂಗತಿಯಾಗಿದೆಯಾದರೂ ನ್ಯಾಯಾಲಯಗಳು ರಿಟ್ ಅಧಿಕಾರದ ಚಲಾವಣೆಯಲ್ಲಿಯೂ ಸಹ ಸರ್ಕಾರಿ ಇಲಾಖೆಗಳು ಅಥವಾ ಪ್ರಾಧಿಕಾರಗಳು ಮಾಡಿರುವ ಸ್ವಾಭಾವಿಕ ನ್ಯಾಯದ ಒಟ್ಟು ಉಲ್ಲಂಘನೆ ಅಥವಾ ಸ್ಪಷ್ಟ ಅಕ್ರಮಗಳು ನ್ಯಾಯಾಲಯದ ಗಮನಕ್ಕೆ ಬಂದ ಸಂದರ್ಭದಲ್ಲಿ, ನ್ಯಾಯಾಲಯಗಳು ಮಧ್ಯಪ್ರವೇಶಿಸಿರುವುದು ಮಾತ್ರವಲ್ಲದೇ, ಅಂತಹ ಮೊಕದ್ದಮೆಗಳಲ್ಲಿ ಅರ್ಜಿದಾರರಿಗೆ ಪರಿಹಾರವನ್ನು ಸಹ ಮಂಜೂರು ಮಾಡಿರುವ ಮೊಕದ್ದಮೆಗಳ ಅಭಾವ ಕಾನೂನು ನ್ಯಾಯಶಾಸ್ತ್ರಕ್ಕೆ ಇರುವುದಿಲ್ಲ ಹಾಗೂ ಇದು ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಈ ನ್ಯಾಯಾಲಯುದ ಅಧಿಕಾರಿ ವ್ಯಾಪ್ತಿಯು ಪ್ರತಿಷೇಧವಾಗಿರದೆ, ನ್ಯಾಯಾಲಯುಗಳು ಅಂತಹ ವಿಷಯುಗಳಲ್ಲಿ ಮಧ್ಯಪ್ರವೇಶಿಸುವುದನ್ನು ನಿರಾಕರಿಸಿರುತ್ತವೆ ಎಂದು ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ವಿವೇಚನೆಯ ಬಳಕೆಯ ಮೇಲೆ ಸ್ವಯಂ ಆಗಿ ವಿಧಿಸಿಕೊಂಡಿರುವ ಒಂದು ನಿರ್ಬಂಧವಾಗಿದೆ.

15. ಪ್ರಸ್ತುತ ಮೊಕದ್ದಮೆಯು, ಅರ್ಜಿದಾರರ ಪರವಾಗಿ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಅದರ ವಿಶೇಷ ಅಧಿಕಾರವನ್ನು ಅನ್ವಯಿಸುವುದಕ್ಕೆ ಹಾಗೂ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಎತ್ತಿರುವ ಆಕ್ಷೇಪಣೆಗಳನ್ನು

ತಳ್ಳಿಹಾಕಿ ಅರ್ಜಿದಾರರಿಗೆ ಸೂಕ್ತ ಪರಿಹಾರವನ್ನು ನೀಡುವುದಕ್ಕೆ ಈ ನ್ಯಾಯಾಲಯವನ್ನು ಪ್ರೇರಿಸುವುದಕ್ಕೆ ದಾಖಲೆಯಲ್ಲಿ ನೀಡಿರುವ ಸಾಕ್ಷ್ಯವು ಪರ್ಯಾಪ್ತವಾಗಿರುವ ಮೊಕದ್ದಮೆಯಾಗಿದೆ.

16. ದಿನಾಂಕ: 12.06.2017ರ ಅನುಬಂಧ– ಜೆ ಇದರಲ್ಲಿರುವ ಅರ್ಜಿದಾರನ ಪರವಾಗಿ ಕರಾರನ್ನು ರದ್ದುಗೊಳಿಸಿ ಹೊರಡಿಸಿರುವ ಪ್ರಶ್ನಿತ ಆದೇಶ ಮತ್ತು ಹೊಸದಾದ ಇ–ಟೆಂಡರ್ ಪ್ರಕ್ರಿಯೆ ಮತ್ತು ಮೂರನೇ ಪಕ್ಷಕಾರರ ಪರವಾಗಿ ಕರಾರನ್ನು ನೀಡಿರುವುದು, ಕಾನೂನಿನಲ್ಲಿ ಸಮರ್ಥನೀಯವಾಗಿರುವುದಿಲ್ಲ ಮತ್ತು ಅದು ಈ ನ್ಯಾಯಾಲಯವು ರದ್ದುಪಡಿಸಿ ವಜಾಗೊಳಿಸಲು ಯೋಗ್ಯವಾದುದಾಗಿರುತ್ತದೆ ಎಂದು ಈ ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ.

17. ಅಂಥ ಮೊಕದ್ದಮೆಗಳಲ್ಲಿ ಮೂರನೇ ಪಕ್ಷಕಾರರಾಗಲಿ ಅಥವಾ ಸಾರ್ವಜನಿಕ ಚುನಾಯಿತ ಪ್ರತಿನಿಧಿಗಳಾಗಲಿ ಮಧ್ಯಪ್ರವೇಶಿಸುವುದನ್ನು ತಳ್ಳಿಹಾಕಲಾಗುವುದಿಲ್ಲ. ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಅಧ್ಯಕ್ಷತೆ ವಹಿಸಿದ ದಿನಾಂಕ: 24.05.2017ರಂದು ನಡೆದ ಸಂಬಂಧಪಟ್ಟ ''ಹೊರಗುತ್ತಿಗೆ ಏಜೆನ್ಸಿ ಸಮಿತಿ''ಯ ಸಭೆಗೆ ಉಲ್ಲೇಖಿಸುವಷ್ಟರಮಟ್ಟಿಗೆ ಮತ್ತು ಉಲ್ಲೇಖ ಸಂಖ್ಯೆ:2 ಸಹ ಸ್ಥಳೀಯ ಚುನಾಯಿತ ಪ್ರತಿನಿಧಿ ಎಂದರೆ ವಿಧಾನಸಭಾ ಸದಸ್ಯರು, ಶೃಂಗೇರಿ ಇವರು ಬರೆದಿರುವ ದಿನಾಂಕ: 15.4.2017ರ ಪತ್ರ ಸಂಖ್ಯೆ: ಎಂಎಲ್ಎ/ಕೊಪ್ಪ/ಸಿ/13/17 ಇದನ್ನು ಉಲ್ಲೇಖಿಸುತ್ತದೆ ಎಂಬುದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಪ್ರಶ್ನಿತ ಆದೇಶದಿಂದಲೇ ಇದು ತಿಳಿದುಬರುತ್ತದೆ. ಅಂತಹ ಮಧ್ಯಪ್ರವೇಶವನ್ನು ಸ್ಥಳೀಯ ಮತಕ್ಷೇತ್ರದ ಚುನಾಯಿತ ಪ್ರತಿನಿಧಿಯೇ ಮಾಡಿದ್ದರೂ ಸಹ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯುಮ, 1999ರ ಉಪಬಂಧಗಳಲ್ಲಿ ಅದನ್ನು ಉಪಬಂಧಿಸಲಾಗಿರುವುದಿಲ್ಲ ಅಥವಾ ಅನ್ಯಥಾ ಅದನ್ನು ಆ ಉಪಬಂಧಗಳಲ್ಲಿ ಕಲ್ಪಿಸಿಯೂ ಇಲ್ಲ. ಅಂತಹ ಕರಾರುಗಳನ್ನು ನೀಡುವ ಸರ್ಕಾರಿ ಇಲಾಖೆಗಳ

ಕಡೆಯಿಂದ ಪಾರದರ್ಶಕತೆಯಿಂದ ಸ್ವತಂತ್ರವಾಗಿ ಮತ್ತು ನ್ಯಾಯೋಚಿತವಾಗಿ ನಿರ್ಧಾರ ಕೈಗೊಳ್ಳುವ ಸಂಬಂಧವಾಗಿ ಕಾನೂನಿನಲ್ಲಿ ತನ್ನದೇ ಆದ ಪಾವಿತ್ರ್ಯತೆಯನ್ನು ಹೊಂದಿರಬೇಕಾಗಿರುತ್ತದೆ ಮತ್ತು ಅದರಲ್ಲಿ ಯಾರೇ ಬಾಹ್ಯ ವ್ಯಕ್ತಿಯ ಮಧ್ಯಪ್ರವೇಶ ಇರಬಾರದು. ಅದಾಗ್ಯೂ, ಪ್ರಸುತ ಅರ್ಜಿದಾರರ ವಿರುದ್ಧ ವಿಚಾರಣೆ ನಡೆದೇ ಇರಲಿಲ್ಲ ಮತ್ತು ಪ್ರಸ್ತುತ ಅರ್ಜಿದಾರರ ವಿರುದ್ಧ ಅಂತಹ ದೂರುಗಳಲ್ಲಿ ಮಾಡಿರುವ ಸಮರ್ಥನೆಗಳನ್ನು ಸತ್ಯಾಪನೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಪ್ರಸ್ತುತ ಅರ್ಜಿದಾರರ ವಿರುದ್ಧ ದಾಖಲೆಯಲ್ಲಿ ಸಂಗತಿಯ ಯಾವುದೇ ನಿರ್ಣಯವಿರುವುದಿಲ್ಲ ಎಂದು ಈ ನ್ಯಾಯಾಲಯಕ್ಕೆ ಕಂಡುಬಂದಿರುವುದರಿಂದ, ಈ ಅಂಶಗಳ ವಿವರಗಳನ್ನು ಪ್ರಸ್ತುತ ಮೊಕದ್ದಮೆಯಲ್ಲಿ ಪರಿಶೀಲಿಸುವ ಅಗತ್ಯವಿರುವುದಿಲ್ಲ. ಒಪ್ಪಂದದ ಖಂಡ–18 ಇದು, ಪ್ರಸ್ತುತ ಮೊಕದ್ದಮೆಯಲ್ಲಿ ಸಮರ್ಥನೀಯುವಾಗಿಲ್ಲ ಹಾಗೂ ಕಾನೂನುಬಾಹಿರವಾದುದೆಂದು ಕಂಡುಬಂದಿದೆಯಾದ್ದರಿಂದ, ಅರ್ಜಿದಾರರಿಗೆ ಸುನಾವಣೆಯ ನೋಟೀಸನ್ನು /ಅವಕಾಶವನ್ನು ನೀಡುವ ಹಾಗೂ ಈ ವಿಷಯದಲ್ಲಿ ವಿಚಾರಣೆ ನಡೆಸುವ ಅಗತ್ಯತೆಯನ್ನು, ಕರಾರು ಸಂಬಂಧಿ ವಿಷಯಗಳಲ್ಲಿಯೂ ಸಹ, ವಿಶೇಷವಾಗಿ ಕರಾರಿನ ಏಕಪಕ್ಷೀಯ ರದ್ದಿಯಾತಿಯ ಸಂದರ್ಭಗಳಲ್ಲಿ ಹೊರತುಪಡಿಸಲಾಗುವುದಿಲ್ಲ.

18. ತದನುಸಾರವಾಗಿ, ಈ ಅರ್ಜಿಯು ಪುರಸ್ಕರಿಸಲು ಯೋಗ್ಯವಾಗಿದೆ. ಅರ್ಜಿದಾರರಿಗೆ 2ನೇ ಪ್ರತ್ಯರ್ಜಿದಾರರು ಸಂದಾಯ ಮಾಡಬೇಕಾದ 20,000/– ರೂಪಾಯಿಗಳ ವೆಚ್ಚ ಸಹಿತವಾಗಿ ಈ ಅರ್ಜಿಯನ್ನು ಪುರಸ್ಕರಿಸಲಾಗಿದೆ ಮತ್ತು ದಿನಾಂಕ: 12.06.2017ರ ಅನುಬಂಧ–ಜೆ ಯಲ್ಲಿರುವ ಪ್ರಶ್ನಿತ ಆದೇಶ ಹಾಗೂ ದಿನಾಂಕ: 16.06.2017ರ ಅನುಬಂಧ–ಕೆ ಯಲ್ಲಿರುವ ಹೊಸ ಇ–ಪ್ರೊಕ್ಯೂರ್‌ಮೆಂಟ್ ಅಧಿಸೂಚನೆ ಹಾಗೂ ದಿನಾಂಕ: 13.07.2017ರ ಅನುಬಂಧ–ಆರ್ 10 ರಲ್ಲಿರುವ ಮೂರನೇ ಪಕ್ಷಕಾರರ ಪರವಾಗಿ ಹೊರಡಿಸಲಾಗಿರುವ ಕಾರ್ಯಾದೇಶ ಇವುಗಳು ವಜಾಗೊಳಿಸಲು ಯೋಗ್ಯವಾಗಿದ್ದು, ತದನುಸಾರವಾಗಿ ವಜಾಗೊಳಿಸಲಾಗಿರುತ್ತದೆ.

ದಿನಾಂಕ: 28.03.2017ರ ಅನುಬಂಧ–ಬಿ ಯಲ್ಲಿನ ಕಾರ್ಯಾದೇಶದ ಪರಿಭಾಷೆಯಲ್ಲಿನ ಸಿಬ್ಬಂದಿಯನ್ನು ಒದಗಿಸಲು ಅರ್ಜಿದಾರರಿಗೆ ಅವಕಾಶ ನೀಡತಕ್ಕದ್ದು ಮತ್ತು ಈ ಕಾರ್ಯಾದೇಶದ ಅನುಷ್ಠಾನಕ್ಕಾಗಿ ಪ್ರತ್ಯರ್ಜಿದಾರರು ಕೂಡಲೇ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ದಿನಾಂಕ: 01.04.2017ರಿಂದ ಒಂದು ವರ್ಷದ ಕರಾರಿನ ಅವಧಿಯಲ್ಲಿನ ತಮ್ಮ ಕರಾರು ಸಂಬಂಧಿ ಬಾಧ್ಯತೆಗಳನ್ನು ನಿರ್ವಹಿಸುವುದು.